# ಬೆಪ್ಪಾಲೆ ಬೊಂಬೆಗಳ ಲೋಕದಲ್ಲಿ

ಚೆಂದದ ಚನ್ನಪಟ್ಟಣ ಬೊಂಬೆಗಳ ಹಿಂದಿದ್ದ ಬೆಪ್ಪಾಲೆ ಮರಗಳ ಸಂಖ್ಯೆ ಹಲವು ಕಾರಣಗಳಿಂದ ಕ್ಷೀಣಿಸುತ್ತಿದೆ. ಈ ಬೊಂಬೆಗಳ ತಯಾರಿಕೆಯಲ್ಲಿ ತೊಡಗಿಕೊಂಡವರು ಕೂಡ ಕಡಿಮೆಯಾಗುತ್ತಿದ್ದಾರೆ.

■ ಎಂ.ಆರ್. ಮಂಜುನಾಥ್







ಮುಂಜಾನೆ ಕ್ಯಾಮೆರಾ ಹಿಡಿದು ಹಕ್ಕಿಗಳ ಚಿತ್ರ ತೆಗೆಯಲು ಮೈಸೂರಿನ ಕುಕ್ಕರಹಳ್ಳಿ ಕೆರೆ ದಂಡೆ ಮೇಲೆ ವಾಕಿಂಗ್ ಹೊರಟಿದ್ದೆ. ಹಕ್ಕಿಯ ಬದಲು ನನಗೆ ಸಿಕ್ಕಿದ್ದು, ಅಪರೂಪವಾಗುತ್ತಿರುವ ಬೆಪ್ಪಾಲೆ ಮರ.

ನಮ್ಮ ಸುತ್ತಮುತ್ತ ಸಾವಿರಾರು ಪ್ರಭೇದದ ಗಿಡ ಮರಗಳಿವೆ. ಅವುಗಳ ಬಗ್ಗೆ ನಮಗೆ ಅರಿವೇ ಇರುವುದಿಲ್ಲ. ಅವುಗಳಿಂದ ನಮಗಾಗುತ್ತಿರುವ ಉಪಯೋಗಗಳ ಕುರಿತೂ ತಿಳಿದಿರುವುದಿಲ್ಲ. ಅಂಥ ಮರಗಳ ಸಾಲಿಗೆ ಸೇರುತ್ತದೆ ಈ ಬೆಪ್ಪಾಲೆ.

ಬೆಪ್ಪಾಲೆ, ಅಪೋಸೈನೇಸಿ ಕುಟುಂಬಕ್ಕೆ ಸೇರಿದ ಪರ್ಣಪಾತಿ ಮರ (ಪಾಲ ಇಂಡಿಗೊ ಅಥವಾ ಡೈಯರ್ಸ್ ಓಲಿಯಾಂಡರ್). ಭಾರತ, ಆಗ್ನೇಯ ಏಷ್ಯಾ, ಆಸ್ಟ್ರೇಲಿಯಾ ದೇಶಗಳಲ್ಲಿ ಕಂಡುಬರುವ ಈ ಮರ, ಒಣ ಪ್ರದೇಶ ಮತ್ತು ಎಲೆಯುದುರುವ ಕಾಡುಗಳಲ್ಲಿ ಹೆಚ್ಚಾಗಿರುತ್ತದೆ. ಭಾರತದಲ್ಲಿ ರಾಜಸ್ಥಾನ, ಮಧ್ಯಪ್ರದೇಶ ಹಾಗೂ ದಕ್ಷಿಣ ಭಾಗದ ಬಯಲುಸೀಮೆಗಳಲ್ಲಿ ಬೆಳೆಯುವುದು ಹೆಚ್ಚು.

ಗಿಡದ ಕಾಯಿಗಳು ಎರಡು ಬೀನ್ಸ್‌ಗಳನ್ನು ಜೋಡಿಸಿದಂತೆ ಕಾಣುತ್ತವೆ. ಮರದ ಕಾಂಡ ಮೆತ್ತಗಿರುವುದರಿಂದ ಇದರಿಂದ ಬೊಂಬೆಗಳು, ಬಾಚಣಿಗೆ, ಬಟ್ಟಲು, ತಟ್ಟೆ, ಚದುರಂಗದ ಕಾಯಿಗಳು, ಬೆಂಕಿಪೆಟ್ಟಿಗೆ, ಮುದ್ರಣ ಹಲಗೆ, ರೂಲುದೊಣ್ಣೆ, ಬಳೆ, ಕೀಚೈನ್ ಇತ್ಯಾದಿ ಕೆತ್ತನೆಯಿರುವ ಆಟಿಕೆಗಳನ್ನು ತಯಾರಿಸಲಾಗುತ್ತದೆ. ಅಷ್ಟೇ ಏಕೆ, ಚನ್ನಪಟ್ಟಣದ ಸುಂದರ ಬೊಂಬೆಗಳು ತಯಾರಾಗುವುದು ಕೂಡ ಇದೇ ಮರದಿಂದ.

ದಸರಾ ಹಬ್ಬ ಬಂದರೆ ಮನೆಮನೆಗಳಲ್ಲಿ ಬೊಂಬೆಗಳನ್ನು ಜೋಡಿಸುವ ಸಂಪ್ರದಾಯದಲ್ಲಿ ಈ ಚನ್ನಪಟ್ಟಣ ಬೊಂಬೆಗಳದ್ದೇ ಪಾರುಪತ್ಯ. ಮಕ್ಕಳ ಕೈಗಳಲ್ಲಿ ಕೂಡ ಬಣ್ಣ ಬಣ್ಣದ ಆಟಿಕೆಗಳು ನಲಿದಾಡುತ್ತಿದ್ದವು. ಈಗಲೂ ಚನ್ನಪಟ್ಟಣ ಬೊಂಬೆಗಳೆಂದರೆ ಆಕರ್ಷಣೆಯೇನೂ ಕಮ್ಮಿಯಿಲ್ಲ. ಆದರೆ ಹಲವು ಕಾರಣಗಳಿಂದ ಆ ಆಕರ್ಷಣೆ ಕಳೆಗುಂದುವ ಲಕ್ಷಣ ಕಾಣುತ್ತಿದೆ.

‘ರೈತರು ಹೊಲ ಗದ್ದೆಗಳಲ್ಲಿ ಬೆಳೆಯುತ್ತಿದ್ದ ಬೆಪ್ಪಾಲೆ ಮರಗಳು ಕಾಣೆಯಾಗುತ್ತಿವೆ. ಸುತ್ತಮುತ್ತ ಹಳ್ಳಿಗಳಿಂದ ಹಾಗೂ ಕಾಡಿನೊಳಗಿಂದ ಈ ಮರವನ್ನು ಹುಡುಕಿ ತರಬೇಕಾದ ಕಾರಣಕ್ಕೆ ಇದರ ಬೆಲೆಯೂ ಹೆಚ್ಚಿದೆ. ಹೀಗಾಗಿ ಬೊಂಬೆಗಳ ತಯಾರಿಯೂ ನೆಲಕಚ್ಚಿದೆ’ ಎಂದು ಚನ್ನಪಟ್ಟಣದ ಬೊಂಬೆ ತಯಾರಿಕಾ ಕೇಂದ್ರದ ರಾಮಕೃಷ್ಣಪ್ಪ ಬೇಸರ ವ್ಯಕ್ತಪಡಿಸುತ್ತಾರೆ.

ಚನ್ನಪಟ್ಟಣ ಬೊಂಬೆಗಳ ತಯಾರಿಕೆಯಲ್ಲಿ ತೊಡಗಿರುವವರ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಿದೆ ಎನ್ನುವುದು ಕರಿಯಪ್ಪನ ದೊಡ್ಡಿ– ಮುನಿಯಪ್ಪನ ದೊಡ್ಡಿಯ ಕೃಷ್ಣ ಪ್ರಸಾದ್ ಅಭಿಪ್ರಾಯ.

‘ಬೊಂಬೆಗಳನ್ನು ತಯಾರಿಸುತ್ತಿದ್ದವರು ಹಣ ಸಂಪಾದನೆಗೆಂದು ಮದುವೆ, ಮುಂಜಿ, ರಾಜಕಾರಣಿಗಳ ಸಮಾರಂಭಗಳಿಗೆ ಅಡುಗೆ ಮಾಡಲು ಹೋಗುತ್ತಿದ್ದಾರೆ. ದಿನಕ್ಕೆ ಸಾವಿರ ರೂಪಾಯಿ ದುಡಿಯುತ್ತಿರುವ ಅವರಿಗೆ ಬೊಂಬೆ ತಯಾರಿಕೆ ಕಡಿಮೆ ಆದಾಯದ ಕೆಲಸವಾಗಿ ಕಾಣುತ್ತಿದೆ. ಮುಂದಿನ ಜನಾಂಗಕ್ಕೆ ಈ ಬೊಂಬೆಗಳ ಪರಿಚಯವಿರುವುದೋ ಇಲ್ಲವೋ’ ಎಂಬ ಆತಂಕದ ನುಡಿ ಅವರದ್ದು.

## ಅಪರೂಪವಾಗುತ್ತಿರುವ ಬೆಪ್ಪಾಲೆ

ಬೆಪ್ಪಾಲೆ, ಮಾರ್ಚ್‌ನಿಂದ ಮೇವರೆಗೆ ಹೂವು ಬಿಡುತ್ತದೆ. ಇದರ ತೊಗಟೆ ಹಳದಿ ಮಿಶ್ರಿತ ಕಂದು ಬಣ್ಣದಿಂದ ಕೂಡಿರುತ್ತದೆ. ಕಡು ಹಸುರು ಬಣ್ಣದ ಹುರುಳಿ ರೀತಿಯ ಕಾಯಿಗಳು ತುದಿಯಲ್ಲಿ ಅಂಟಿಕೊಂಡಿರುತ್ತವೆ. ಇವುಗಳ ಬೀಜ ಪ್ರಸರಣ ಗಾಳಿಯಿಂದ ಆಗುತ್ತದೆ. ಬಿಳಿ ಬಣ್ಣದ ಹೂವು ನಕ್ಷತ್ರದ ರೀತಿ ಕಾಣುತ್ತದೆ. ಇದರ ಎಲೆ, ಹೂವು ಮತ್ತು ಬೇರುಗಳಿಂದ ನೀಲಿ ಬಣ್ಣ ತಯಾರಿಸಬಹುದು.

ಈ ಮರದ ಕಾಯಿಗಳಿಂದ ಸುರಿಯುವ ಬಿಳಿ ಅಂಟಿನ ಹಾಲು, ಮರದ ತೊಗಟೆ, ಎಲೆ ಹಾಗೂ ಬೀಜಗಳಲ್ಲಿ ಔಷಧೀಯ ಗುಣಗಳಿವೆ. ತೊಗಟೆ, ಬೀಜಗಳನ್ನು ಅಜೀರ್ಣ–ಪಿತ್ತವಿಕಾರಗಳ ಚಿಕಿತ್ಸೆಗೆ, ತೊಗಟೆ ಎಲೆಗಳ ಕಷಾಯವನ್ನು ಹೊಟ್ಟೆನೋವಿಗೆ ಮದ್ದಾಗಿ ಬಳಸುತ್ತಾರೆ. ಬೇರಿನ ಸಾರವನ್ನು ರಕ್ತದೊತ್ತಡ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಆದರೆ ಹಲವು ಕಾರಣಗಳಿಂದ ಬೆಪ್ಪಾಲೆ ಈಚೆಗೆ ಅಪರೂಪವಾಗುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in